ಅ) ಜಿಲ್ಲೆಗಳಲ್ಲಿ ಬಹುತೇಕ ರಸ್ತೆಗಳ ಜಿಲ್ಲಾ ಪಂಚಾಯತ್‌ನ ಆಡಳಿತಕ್ಕೆ ಒಳಪಟ್ಟಿರುವುದರಿಂದ, ಬಹುಪಾಲು ರಸ್ತೆಗಳು ರಿಪೇರಿ ಆಗದೆ ತೊಂದರೆ ಆಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ಈ ರಸ್ತೆಗಳಲ್ಲಿ ಕೆಲವನ್ನು ಲೋಕೋಪಯೋಗಿ ಇಲಾಖೆಗೆ ತೆಗೆದುಕೊಂಡು ರಿಪೇರಿಮಾಡುವ ಬಗ್ಗೆ ಸರ್ಕಾರದವರು ಪರಿಶೀಲಿಸಿರುವರೇ;

ಇ) ಹಾಗಿದ್ದಲ್ಲಿ, ಪ್ರತಿ ಜಿಲ್ಲೆ ಅಥವಾ ಪ್ರತಿ ವಿಧಾನ ಸಭಾ ಕ್ಷೇತ್ರದಲ್ಲಿ ಎಷ್ಟು ಕಿ.ಮೀ. ರಸ್ತೆ ಪಹಿಸಿಕೊಳ್ಳಲಾಗುವುದು?

ಶ್ರಿ ಸಿ. ಎಂ. ಉದಾಸಿ (ಲೋಕೋಪಯೋಗಿ ಸಚಿವರು ) :

ಅ) ಜಿಲ್ಲಾ ಪಂಚಾಯತ್ ಆಡಳಿತ ವ್ಯಾಪ್ತಿಗೆ ಒಳಪಟ್ಟಿರುವ ರಸ್ತೆಗಳು ಮುಖ್ಯ ಹಳ್ಳಿರಸ್ತೆ ತಾಲ್ಲೂಕು ಬೋರ್ಡ ರಸ್ತೆ ಮತ್ತು ಐ.ಸಿ. ಆರ್.ಸಿ., ಜೆ.ಆರ್.ವೈ. ಯೋಜನೆ ಅಡಿ ಮಾಡಿರುವುದರಿಂದ, ಅವು ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆ ಮಟ್ಟಕ್ಕೆ ಇರದೇ ತೊಂದರೆಯಾಗಿರಬಹುದಾಗಿದೆ.

ಇ) ಇದಲ್ಲದೇ, ಪ್ರತಿ ವಿಧಾನ ಸಭಾ ಕ್ಷೇತ್ರದಲ್ಲಿ 50 ಕಿ.ಮೀ ರಸ್ತೆಗಳ ಲೋಕೋಪಯೋಗಿ ಇಲಾಖೆಗೆ ತೆಗೆದುಕೊಳ್ಳುವ ಚಿಂತನೆ ಇದೆ.

**ದ. ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿರುವ ಪಶುವೈದ್ಯಕೀಯ ಆಸ್ಪತ್ರೆಗಳು**

230 (491) ಶ್ರೀ ಯು. ಆರ್. ಸಭಾಪತಿ ( ಉಡುಪಿ) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿರುವ ಪಶುವೈದ್ಯಕೀಯ ಆಸ್ಪತ್ರೆಗಳ ಸಂಖ್ಯೆ ಎಷ್ಟು;

ಆ) ಈ ಜಿಲ್ಲೆಗಳಲ್ಲಿ ಔಷಧಿಗಳ ಕೊರತೆ ಹಾಗೂ ಮತ್ತು ಸಿಬ್ಬಂದಿಗಳ ಕೊರತೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ ಸರಕಾರದವರು ತೆಗೆದುದೊಂಡ ಕ್ರಮಗಳೇನು?

ಶ್ರೀ ಬಿ. ಬಿ. ನಿಂಗಯ್ಯ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) 1) ದಕ್ಷಿಣ ಕನ್ನಡ ಜಿಲ್ಲೆ - 7
2) ಉಡುಪಿ ಜಿಲ್ಲೆ - 7

ಆ) ಬಂದಿದೆ

ಇ) ಖಾಲಿ ಇರುವ ಸಹಾಯಕ ನಿರ್ದೇಶಕರ, ಪಶು ವೈದ್ಯಕೀಯ ಮೇಲ್ವಿಚಾರಕರ, ಹಿರಿಯ ಪಶುವೈದ್ಯಕೀಯ ಪರೀಕ್ಷಕರ ಖಾಲಿ ಹುದ್ದೆಗಳನ್ನು ಮುಂಬಡ್ತಿ ಮೂಲಕ ಪಶುವೈದ್ಯಾಧಿಕಾರಿಗಳ ಖಾಲಿ ಹುದ್ದೆಗಳನ್ನು ಮುಂಬಡ್ತಿ ಮೂಲಕ ಪಶುವೈದ್ಯಾಧಿಕಾರಿಗಳ ಖಾಲಿ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಹಾಗೂ ಪಶು ವೈದ್ಯಕೀಯ ಸಹಾಯಕರ ಖಾಲಿ ಹುದ್ದೆಗಳನ್ನು ತರಬೇತಿ ಹೊಂದಿದ ಅಭ್ಯರ್ಥಿಗಳಿಂದ ತುಂಬಲು ಕ್ರಮ ಕೈಗೊಳ್ಳಲಾಗಿದೆ.

ಔಷಧಿ ಮತ್ತು ರಾಸಾಯನಿಕಗಳನ್ನು ದರಗುತ್ತಿಗೆ ಸಂಸ್ಥೆಗಳಿಂದ ಖರೀದಿಸಬೇಕಾಗಿದ್ದು, ದರಗುತ್ತಿಗೆ ನಿಗಧಿಪಡಿಸುವ ಪ್ರಕ್ರಿಯೆ ನಡೆಯುತ್ತಿದೆ.

**ಉಡುಪಿ ಕ್ಷೇತ್ರದಲ್ಲಿ ರಸ್ತೆ ಡಾಂಬರೀಕರಣಕ್ಕೆ ಮಂಜುರಾದ ಹಣ**

231(490) ಶ್ರೀ ಯು. ಆರ್. ಸಭಾಪತಿ (ಉಡುಪಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ರಾಜ್ಯದಲ್ಲಿ 1997-98ರ ಸಾಲಿನಲ್ಲಿ ಎಷ್ಟು ಕಿ.ಮೀ. ಲೋಕೋಪಯೋಗಿ ಇಲಾಖಾ ರಸ್ತೆ ಡಾಂಬರೀಕರಣಕ್ಕೆ ಮಂಜೂರಾತಿ ನೀಡಲಾಗಿದೆ;

ಆ) ಇವುಗಳಲ್ಲಿ ಡಾಂಬರೀಕರಣ ಪೂರ್ತಿಗೊಂಡ ರಸ್ತೆಗಳು ಎಷ್ಟು (ವಿವರ ನೀಡುವುದು)

ಇ) ಇವುಗಳಲ್ಲಿ ಉಡುಪಿ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಡಾಂಬರೀಕರಣಕ್ಕೆ ಮಂಜೂರಾತಿ ನೀಡಿದ ರಸ್ತೆಗಳೆಷ್ಟು; (ವಿವರ ನೀಡುವುದು)

ಈ) ಅನುದಾನ ಬಿಡುಗಡೆ ಹಾಗೂ ಡಾಂಬರೀಕರಣ ಸರಬರಾಜಿನಲ್ಲಿ ವಿಳಂಬವಾಗಿದೆಯೇ;

ಶ್ರೀ ಸಿ. ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) 1997-98ನೇ ಸಾಲಿನಲ್ಲಿ ಒಟ್ಟು 3280 ಕಿ.ಮೀ. ರಸ್ತೆ ಡಾಂಬರೀಕರಣಕ್ಕೆ ಮಂಜೂರಾತಿ ನೀಡಲಾಗಿದೆ.

ಆ) 1997-98ನೇ ಸಾಲಿನಲ್ಲಿ ಡಾಂಬರೀಕರಣ ಪೂರ್ಣಗೊಂಡಿರುವ ರಸ್ತೆಗಳ ಉದ್ದ 1100 ಕಿ.ಮೀ.

| | | |
|---|---|---|
| ದಕ್ಷಿಣ ವಲಯ | - | 410 ಕಿ.ಮೀ |
| ಉತ್ತರ ವಲಯ | - | 690 ಕಿ.ಮೀ |

ಇ) ಉಡುಪಿ ವಿಧಾನ ಸಭೆ ಕ್ಷೇತ್ರ ವ್ಯಾಪ್ತಿಯಲ್ಲಿ ಡಾಂಬರೀಕರಣಕ್ಕಾಗಿ ಮಂಜೂರಾತಿ ನೀಡಿರುವ ಒಟ್ಟು ರಸ್ತೆಗಳು - 7, ವಿವರ ಕೆಳಕಂಡಂತಿವೆ :-

| | (ಕಿ.ಮೀ.ಗಳಲ್ಲಿ) |
|---|---|
| 1) ಅತ್ರಾಡಿ - ಹಿರೇಬಿಟ್ಟು, ಬೆಳ್ಳ ರಸ್ತೆಯ ಕಿ.ಮೀ. 8.95 ರಿಂದ 9.35 ಕಿ.ಮೀ. | - 0.40 |
| 2) - ಅದೇ- 9.40 ರಿಂದ 9.80 | - 0.40 |
| 3) ಆಗುಂಬೆ - ಮಲ್ಪೆ ರಾಜ್ಯಹೆದ್ದಾರಿ ಕಿ.ಮೀ. 38.50 ರಿಂದ 39.80 | - 0.40 |
| 4) - ಅದೇ- ಕಿ.ಮಿ. 23.0 ರಿಂದ 24.0 ಕಿ.ಮೀ.ವರೆಗೆ | - 1.00 |
| 5) - ಅದೇ- 26.0 ಕಿ.ಮೀ. ರಿಂದ 27.0 ಕಿ.ಮೀ. | - 1.00 |
| 6) - ಅದೇ- 37.50 ರಿಂದ 38.50 | - 1.00 |
| 7) - ಅದೇ- 42.40 ರಿಂದ 43.40- 1.00 | - 1.00 |
| ಒಟ್ಟು | - 5.20 |